QP CODE: 30632

# ಆರನೆಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ, ಮೇ / ಜೂನ್, 2026

## (ಎನ್‌ಇಪಿ ಸ್ಕೀಂ)

## ಐಚ್ಛಿಕ ಕನ್ನಡ ಪತ್ರಿಕೆ - 14

## (NAF 0520) ಅನಿಕೇತನ - 6

### ಸಾಂಸ್ಕೃತಿಕ ಅಧ್ಯಯನಗಳು : ಪಠ್ಯಗಳ ಬಹುಶಿಸ್ತೀಯ ಅಧ್ಯಯನ (ಘಟಕ - 14)

ಅವಧಿ : 2 ಗಂಟೆಗಳು ಗರಿಷ್ಠ ಅಂಕಗಳು : 60

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರವನ್ನು ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ಬರೆಯಬೇಕು ಹಾಗೂ ಅದೇ ಪ್ರಶ್ನೆಗಳಿಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಪ್ರಶ್ನೆ ಪತ್ರಿಕೆಯಲ್ಲಿನ ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ನೀಡಲಾದ ಆಯ್ಕೆ ಉತ್ತರಗಳ (Options) ಮೇಲೆ ಯಾವುದೇ ರೀತಿಯ ಗುರುತು ಸೂಚಕ ಚಿಹ್ನೆಗಳಾದ ವೃತ್ತ ಹಾಕುವುದು, ಚುಕ್ಕೆ ಇಡುವುದು, ಸರಿ ಗುರುತು ಮಾಡುವುದು (✓) ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆಯ ಮೇಲೆ (ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

### ವಿಭಾಗ - I

**I. ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ.** **(10x1=10)**

I-1. ಅಕ್ಕಮಹಾದೇವಿಯ ವಚನಗಳ ಅಂಕಿತ

(ಅ) ಶಂಭುಜಕ್ಕೇಶ್ವರ (ಆ) ಚೆನ್ನಮಲ್ಲಿಕಾರ್ಜುನ

(ಇ) ಅಮರೇಶ್ವರ ಲಿಂಗ (ಈ) ಉರಿಲಿಂಗಪೆದ್ದಿಗಳರಸ

I-2. ಏಕೈಕ ದಲಿತ ವಚನಕಾರ್ತಿ

(ಅ) ಸತ್ಯಕ್ಕ (ಆ) ಆಯ್ದಕ್ಕಿ ಲಕ್ಕಮ್ಮ (ಇ) ಕಾಳವ್ವೆ (ಈ) ಗೊಗ್ಗವ್ವೆ

I-3. ಭಾರತ ಯಾವಾಗ ಬ್ರಿಟಿಷ್ ರಾಣಿಯ ನೇರ ಆಡಳಿತಕ್ಕೆ ಒಳಗಾಯಿತು?

(ಅ) 1600 (ಆ) 1856 (ಇ) 1857 (ಈ) 1870

I-4. ತೇಜಸ್ವಿಯ ಕೃತಿಗಳು

(ಅ) ಕರ್ವಾಲೊ (ಆ) ಹಕ್ಕಿ ಪುಕ್ಕ (ಇ) ಚಿದಂಬರ ರಹಸ್ಯ (ಈ) ಮೇಲಿನ ಎಲ್ಲವೂ

I-5. 'ಲಾಳಿ' ಪದದ ಅರ್ಥ

(ಅ) ಇಕ್ಕಳ (ಆ) ತೂಕ (ಇ) ನೂಲು (ಈ) ಚರಕ

I-6. ಕೊಡಗಿನ ಗೌರಮ್ಮರ ಚಿಂತನೆಯನ್ನು ಪ್ರಭಾವಿಸಿದ ವ್ಯಕ್ತಿ

(ಅ) ನೆಹರು (ಆ) ಗಾಂಧಿ (ಇ) ಬೇಂದ್ರೆ (ಈ) ಪಟೇಲ್

I-7. ಮೀನು ಹಿಡಿಯುವ ಹವ್ಯಾಸ ಇದ್ದ ಲೇಖಕ

(ಅ) ಶರೀಫ (ಆ) ಲಂಕೇಶ (ಇ) ಕಾಳೇಗೌಡ ನಾಗವಾರ (ಈ) ತೇಜಸ್ವಿ

I-8. ಅಜಗಣ್ಣ ಮತ್ತು ಅಜಗಣ್ಣ ತಂದೆ ಇದು ಯಾರ ಅಂಕಿತನಾಮ?

(ಅ) ಉರಿಲಿಂಗ ಪೆದ್ದಿ (ಆ) ಗಜೇಶ ಮಸಣಯ್ಯ

(ಇ) ಸತ್ಯಕ್ಕ (ಈ) ಮುಕ್ತಾಯಕ್ಕ

I-9. ಪಾರ್ವತಿ ಯಾವ ಕತೆಯ ನಾಯಕಿ?

(ಅ) ಒಂದು ಚಿತ್ರ (ಆ) ಅಪರಾಧಿ ಯಾರು?

(ಇ) ಪುನರ್ವಿವಾಹ (ಈ) ಮುನ್ನಾದಿನ

I-10. ಮಾನಿಟರ್ ಎದರೆ

(ಅ) ಉಡ (ಆ) ಹಾವು (ಇ) ಹಾರುವ ಓತಿ (ಈ) ಯಾವುದೂ ಅಲ್ಲ

## ವಿಭಾಗ - II

**II. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. (5x3=15)**

II-1. ಆಯ್ದಕ್ಕಿ ಲಕ್ಕಮ್ಮ

II-2. ಶಿಶುನಾಳ ಶರೀಫ

II-3. ಗಾಂಧಿಯವರೊಂದಿಗೆ ಗೌರಮ್ಮನವರ ಭೇಟಿ

II-4. ಪೂರ್ಣಚಂದ್ರ ತೇಜಸ್ವಿ

II-5. ಅರ್ಧಲೋಟ ನೀರಿನ ಕ್ರಾಂತಿ

II-6. ಚೀಂಕ್ರ ಮೇಸ್ತ್ರಿ

II-7. ಕಿವಿ

II-8. ಸತ್ಯಕ್ಕ

## ವಿಭಾಗ - III

**III. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರಕ್ಕೆ ನಿಖರವಾದ ಉತ್ತರ ಬರೆಯಿರಿ. (3x5=15)**

III-1. ಅಕ್ಕಮಹಾದೇವಿಯ ವಚನಗಳ ವೈಶಿಷ್ಟ್ಯವನ್ನು ತಿಳಿಸಿ.

III-2. 'ಗಿರಣಿ ವಿಸ್ತಾರ ನೋಡಮ್ಮಾ' ಕವಿತೆಯಲ್ಲಿನ ವಸಾಹತು ಪ್ರಜ್ಞೆಯನ್ನು ಗುರುತಿಸಿ.

III-3. ಕಾಡನ ಜೀವನ ಉದಾರ ನಡೆಯನ್ನು 'ಮುನ್ನಾದಿನ' ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

III-4. ಕುಕ್ಕುಟ ಪಿಶಾಚದ ವರ್ತನೆಗೆ ಕಾರಣವೇನು ? ವಿವರಿಸಿ.

III-5. ಆಹಾರ ಸರಪಣಿಯ ಸ್ವಾರಸ್ಯ 'ನುಂಗಲಾರದ ತುತ್ತು' ಕತೆಯಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

## ವಿಭಾಗ - IV

**IV. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2x10=20)**

IV-1. ವಚನಗಳಲ್ಲಿ ಮೂಡಿರುವ ಸಾಮಾಜಿಕ ಪ್ರಜ್ಞೆಯನ್ನು ವಚನಕಾರ್ತಿಯರಲ್ಲಿ ಗುರುತಿಸಿ.

**ಅಥವಾ**

ತೇಜಸ್ವಿಯವರ ಕತೆಗಳಲ್ಲಿನ ಪರಿಸರ ಪ್ರಜ್ಞೆಯನ್ನು ಮಾನಿಟರ್ ಮತ್ತು ಚೀಂಕ್ರಮೇಸ್ತ್ರಿ ಮತ್ತು ಅರಿಸ್ಟಾಟಲ್ ಕತೆಗಳ ಉದಾಹರಣೆಯೊಂದಿಗೆ ವಿವರಿಸಿ.

IV-2. ಸಮಾಜ ಸುಧಾರಣೆಯ ಆಶಯಗಳು ಪುನರ್ವಿವಾಹ ಮತ್ತು ಅಪರಾಧಿ ಯಾರು ? ಕತೆಗಳಲ್ಲಿ ಹೇಗೆ ಮೂಡಿ ಬಂದಿದೆ ? ವಿಶ್ಲೇಷಿಸಿ.

**ಅಥವಾ**

ಶಿಶುನಾಳ ಶರೀಫರ ಆಯ್ದ ತತ್ವಪದಗಳಲ್ಲಿರುವ ವಸಾಹತು ಪ್ರಜ್ಞೆಯನ್ನು ವಿಶ್ಲೇಷಿಸಿ.

* * *